ಅವರು ಆಟೋರಿಕ್ಷಾಕ್ಕೆ ಮೀಟರ್ ಮೇಲೆ ಬರುತ್ತಾ ಇಲ್ಲ. ನಾಲ್ಕೈದು ಆರು ಜನ ದಿನನಿತ್ಯ ಅವನ ಮನೆಯಿಂದ ಯುವಕ ಆಟೋರಿಕ್ಷ ತಂದಾಗ ಆ ಆಟೋರಿಕ್ಷಾದಲ್ಲಿ ಅವರನ್ನು ಹಾಕಿಕೊಂಡು ಬರುವಂಥ ವ್ಯವಸ್ಥೆ ಇದೆ. ಇದರಿಂದ ನಿರುದ್ಯೋಗಿ ಯುವಕರಿಗೆ ತೊಂದರೆಯಾಗಿದೆ. ಇಡೀ ಆಟೋರಿಕ್ಷಾ ವ್ಯವಸ್ಥೆ ಕುಸಿದು ಬೀಳುವಂತಹ ವ್ಯವಸ್ಥೆಯಾಗಿದೆ. ಪ್ರಯಾಣಿಕರಿಗೆ ತುಂಬಾ ತೊಂದರೆಯಾಗಿದೆ. ಸರ್ಕಾರವನ್ನು ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಏನು ಆದೇಶವನ್ನು ಜಿಲ್ಲಾಧಿಕಾರಿಯವರು ಮಾಡಿದ್ದಾರೆ ತಕ್ಷಣ ಆ ಆದೇಶವನ್ನು ವಿತ್‌ಡ್ರಾ ಮಾಡಬೇಕು. ಇವತ್ತು ಸಾಲ ತೆಗೆದುಕೊಂಡು ಸಾಲ ಕಟ್ಟಲಿಕ್ಕೆ ಈ ರೀತಿಯ ಪರವಾನಗಿಯಿಂದ ಖಂಡಿತವಾಗಿ ಆಟೋರಿಕ್ಷಾ ಚಾಲಕರಿಗೆ ಸಾಧ್ಯವಿಲ್ಲ. ಅದಕ್ಕಾಗಿ ಸರ್ಕಾರ ಈ ಒಂದು ಆದೇಶವನ್ನು ಹಿಂತೆಗೆದುಕೊಂಡು ಎಲ್ಲಾ ತಾಲ್ಲೂಕು ಕೇಂದ್ರಕ್ಕೆ ಬರುವಂಥ ಆಟೋರಿಕ್ಷಾಗಳಿಗೆ ಪರವಾನಗಿಯನ್ನು ಕೊಟ್ಟು ಎಲ್ಲಾ ಯುವಕರು ತಮ್ಮ ಸ್ವಂತ ಕಾಲಿನಲ್ಲಿ ನಿಲ್ಲುವಂತೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ನಮ್ರವಾಗಿ ವಿನಂತಿ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ (ಉಪಮುಖ್ಯಮಂತ್ರಿಗಳು): ಸನ್ಮಾನ್ಯ ಅಧ್ಯಕ್ಷರೆ, ಇವತ್ತು 1-7-97ರಲ್ಲಿ ಒಂದು ಆದೇಶವನ್ನು ಹೊರಡಿಸಿ ಹೊಸ ಆಟೋರಿಕ್ಷಾಗಳಿಗೆ ಪರವಾನಗಿಯನ್ನು ಕೊಡುವುದು ಬೇಡವೆಂದು ತೀರ್ಮಾನ ಮಾಡಿದ್ದಾರೆಂದು ಹೇಳಿದ್ದಾರೆ. ನಾನು ಸಂಬಂಧಪಟ್ಟ ಮಂತ್ರಿಗಳಿಗೆ ಹೇಳಿ ಇವತ್ತು ಉತ್ತರ ತರಿಸಿ ಒದಗಿಸಿಕೊಡುತ್ತೇನೆ.

(ಎ) ಮಹಾರಾಷ್ಟ್ರ ಸರ್ಕಾರ ಹುತಾತ್ಮರಾದ ಕುಟುಂಬದವರಿಗೆ ಒಂದು ಸಾವಿರ ರೂಪಾಯಿ ಮಾಸಾಶನ ಘೋಷಿಸಿರುವಂತೆ ಕರ್ನಾಟಕ ಸರ್ಕಾರದವರು ಘೋಷಿಸುವುದು.

ಶ್ರೀ ಜಯರಾಮಶೆಟ್ಟಿ (ಉಲ್ಲಾಳ): ಸನ್ಮಾನ್ಯ ಅಧ್ಯಕ್ಷರೆ, ಮಹಾರಾಷ್ಟ್ರ ಸರ್ಕಾರವು ಕರ್ನಾಟಕ ಮಹಾರಾಷ್ಟ್ರ ಗಡಿ ವಿವಾದದ ಬಗ್ಗೆ ಆದ ಆಂದೋಳನದಲ್ಲಿ ಸುಮಾರು 70 ಜನ ಹುತಾತ್ಮರಾದವರಿಗೆ ಸ್ವಾಂತ್ರತ್ಯೋತ್ಸವದ ಸ್ವರ್ಣ ಜಯಂತಿಯ ಸಂದರ್ಭದಲ್ಲಿ ಮಾಸಿಕ ಒಂದು ಸಾವಿರ ರೂಪಾಯಿಯ ಮಾಸಾಶನವನ್ನು ಘೋಷಿಸಿದೆ. ಅದರ ವಿವರ ಹೀಗಿದೆ:

'In a major policy decision the Sena-BJP Government declared on Tuesday that 70 persons killed in police firing during Maharastra-Karnataka Border agitation ;in 1960 will be treated as martyrs and that their kind will be accorded a financial assistance of Rs.1000/- per month

ಇದು ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸರ್ಕಾರ ಆಜ್ಞೆ ಹೊರಡಿಸಿದೆ. ನನ್ನ ನಿವೇದನೆ ಇಷ್ಟೆ. ಕರ್ನಾಟಕ, ಕೇರಳ ಗಡಿ ವಿವಾದದಲ್ಲಿ ಕಾಸರಗೋಡು ವಿಲೀನಕರಣ ಕ್ರಿಯಾ

ಸಮಿತಿಯವರು ಕಳೆದ ಹತ್ತಾರು ವರ್ಷಗಳ ಕೆಳಗಡೆ ಹೋರಾಟವನ್ನು ನಡೆಸಿದರು. ಈ ಹೋರಾಟದ ಸಂದರ್ಭದಲ್ಲಿ ಕೇರಳದಲ್ಲಿ ಇಬ್ಬರು ಶಾಂತರಾಮಶೆಣೈ, ಸುಧಾಕರ್ ಅಗ್ನಿತಾಯ ಹುತಾತ್ಮರಾಗಿದ್ದರು. ಕರ್ನಾಟಕಕ್ಕೆ ಕಾಸರಗೋಡು ತಾಲ್ಲೂಕು ವಿಲೀನೀಕರಣ ಆಗಬೇಕೆಂಬ ಒತ್ತಾಯವನ್ನು ಈ ಸದನದಲ್ಲಿ ಬಹಳಷ್ಟು ಸಾರಿ ನಾವು ಮಾಡಿದ್ದೇವೆ. ಈ ಕಾಸರಗೋಡು ಕರ್ನಾಟಕಕ್ಕೆ ವಿಲೀನಕರಣಕ್ಕೆ ಪ್ರೋತ್ಸಾಹ ಕೊಡುವ ದೃಷ್ಟಿಯಲ್ಲಿ, ಮಹಾರಾಷ್ಟ್ರ ಸರ್ಕಾರ ಏನು ಹುತಾತ್ಮರಾದ 70 ಜನರಿಗೆ ಮಾಸಾಶನ ಕೊಡುವ ದೃಷ್ಟಿಯಲ್ಲಿ ಆ ಇಬ್ಬರು ವಿದ್ಯಾರ್ಥಿಗಳು ಏನು ಹುತಾತ್ಮರಾಗಿದ್ದಾರೆ. ಅವರ ಕುಟುಂಬಕ್ಕೆ ಕರ್ನಾಟಕ ಸರ್ಕಾರ ಈಗ ಒಂದು ಸಾವಿರ ರೂಪಾಯಿಗಳಂತೆ ಮಹಾರಾಷ್ಟ್ರ ಸರ್ಕಾರ ಏನು ಘೋಷಣೆ ಮಾಡಿದ್ದಾರೆ, ಆ ರೀತಿಯ ಸಂಭಾವನೆಯನ್ನು ಕೊಡಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ. ಕಳೆದ ಮಾರ್ಚಿ ತಿಂಗಳ 2ನೇ ತಾರಿಖಿನಂದು ಕಾಸರಗೋಡಿನಲ್ಲಿ ಸಮ್ಮೇಳನವಾಯಿತು. ಆಗ ಅಲ್ಲಿ ಮಾನ್ಯ ನಾಣಯ್ಯನವರು ಪ್ರತಿನಿಧಿಸಿದ್ದರು. ನಾನು ಕೂಡ ಆ ಸಮ್ಮೇಳನಲ್ಲಿ ಭಾಗವಹಿಸಿದ್ದೆ, ಆ ಸಂದರ್ಭದಲ್ಲಿ ಮಾನ್ಯ ನಾಣಯ್ಯನವರು ನಾವು ಬೆಳಗಾಂ ಚಳುವಳಿಯ ಬಗ್ಗೆ ಕಾಸರಗೋಡನ್ನು ಬಹಳಷ್ಟು ದೂರಪಿಟ್ಟಿದ್ದೇವೆಂದು ಹೇಳಿದರು. ಈ ಕಾಸರಗೋಡು ಖಂಡಿತವಾಗಿಯೂ ಕರ್ನಾಟಕಕ್ಕೆ ಬರಬೇಕು, ನಮ್ಮ ಹಕ್ಕು, ಒತ್ತಾಯ ಮಾಡುತ್ತಿರುವಂತಹ ಸಂದರ್ಭದಲ್ಲಿ ತಾವು ಕಾಸರಗೋಡಿನ ಆ ಚಳುವಳಿಗೆ ಬೆಂಬಲವನ್ನು ಕೊಡಬೇಕು ಮತ್ತು ಈ ಇಬ್ಬರು ಹುತಾತ್ಮರಿಗೆ ಪರಿಹಾರ ಕೊಡಬೇಕು ಮತ್ತು ಈ ಕಾಸರಗೋಡು ಕರ್ನಾಟಕ ರಾಜ್ಯಕ್ಕೆ ಸೇರಬೇಕೆಂಬ ಒತ್ತಾಯದ ಬಗ್ಗೆ ಈ ಸರ್ಕಾರ, ಸದನ ಬಹಳಷ್ಟು ಚುರುಕಾಗಿ ಕೆಲಸ ಮಾಡಬೇಕೆಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀಮತಿ ಲೀಲಾದೇವಿ ಆರ್.ಪ್ರಸಾದ್: ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಗಡಿ ಭಾಗದಲ್ಲಿ ಇರುವಂತಹ ಕಾಸರಗೋಡು ಇರಬಹುದು, ಮಹಾರಾಷ್ಟ್ರದ ಗಡಿ ಇರಬಹುದು, ತಮಿಳುನಾಡಿನ ಗಡಿ ಇರಬಹುದು, ಈ ಸ್ವಾತಂತ್ರ್ಯ ಹಬ್ಬದ ಸಂದರ್ಭದಲ್ಲಿ ಮಹಾರಾಷ್ಟ್ರ ಸರ್ಕಾರದವರು ಯಾವ ರೀತಿಯಾಗಿ ತೀರ್ಮಾನ ತೆಗೆದುಕೊಂಡಿದ್ದಾರೆ ಹಾಗೂ ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ ಪರಿಹಾರ ಕೊಡುವಂತಹ, ಮಾಸಾಶನ ಕೊಡಬೇಕೆನ್ನುವುದರ ಬಗ್ಗೆ ನಾನು ಈಗಾಗಲೇ ಯೋಚನೆ ಮಾಡುತ್ತಿದ್ದೇನೆ. ನಾನು ಎಲ್ಲಾ ಪರಿಪೂರ್ಣವಾದ ಮಾಹಿತಿಯನ್ನು ಸಂಬಂಧಪಟ್ಟವರಿಂದ ತರಿಸಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

(ಏ) ಅಬಕಾರಿ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಆಗುತ್ತಿರುವ ನಷ್ಟ

ಶ್ರೀ ಎಸ್.ಎಂ.ನಾಗರಾಜು (ತರೀಕೆರೆ): ಮಾನ್ಯ ಅಧ್ಯಕ್ಷರೆ, ಅಬಕಾರಿ ಇಲಾಖೆಯಿಂದ ರಾಜ್ಯಸರ್ಕಾರಕ್ಕೆ ಆಗುತ್ತಿರುವಂತಹ ನಷ್ಟದ ಬಗ್ಗೆ ಹಿಂದೆ ಎಲ್ಲಾ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಸರ್ಕಾರದಿಂದ ನಮಗೆ ಹೆಚ್ಚಿನ ಆದಾಯ ಬರುತ್ತಿದೆನ್ನುವಂತಹ